(ಇಂದು ದಿನಾಂಕ:17-01-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ವಾದಿಯರ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದ:**

11. ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಎಲ್ಲ ಮ್ಯೂಟೇಶನ್‌ಗಳು ವಾದಿಯರ ಗಮನಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಖರೀದಿ ಪೂರ್ವದಲ್ಲಿ ಯಾವ ಯಾವ ದಾಖಲೆಗಳನ್ನು ಪರೀಶೀಲನೆ ಮಾಡಿದ್ದರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಶರಣಯ್ಯರವರ ಶಿಶು ಮಕ್ಕಳು ಸಮಾಜದಲ್ಲಿ ತಾವು ಒಳ್ಳೆಯ ಸ್ಥಾನದಲ್ಲಿ ಇದ್ದುಕೊಡಿದ್ದರಿಂದ ಮಟಕಾ, ಓಸಿ ಆಡಕೂಡದು ಅಂತಾ ಅವರಿಗೆ ಬುದ್ದಿವಾದ ಹೇಳಿದ್ದರು ಎಂದರೆ ಸರಿಯಲ್ಲ.

12. ಸಾಮಾನ್ಯವಾಗಿ ಆಸ್ತಿ ಖರೀದಿಸುವ ಪೂರ್ವದಲ್ಲಿ ಆಸ್ತಿಯ ಮೇಲೆ ಸಾಲ ಇದೆಯೋ ಇಲ್ಲವೋ ಮತ್ತು ಆಸ್ತಿಯ ಮಾಲೀಕತ್ವದ ಬಗ್ಗೆ ಕೂಲಂಕುಷವಾಗಿ ವಿಚಾರಣೆ ಮಾಡಿ ಆಸ್ತಿ ಖರೀದಿ ಮಾಡಲಾಗುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ 1/9 ಭಾಗ ಇದೆ ಎಂದರೆ, ನನಗೆ ಗೊತ್ತಿಲ್ಲ. ತಂದೆ ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಭಾಗ ಇರುತ್ತದೆ. ವಾದಿಯರು ಹೆಣ್ಣುಮಕ್ಕಳು ಆಗಿದ್ದರಿಂದ ಅವರಿಗೆ ಭಾಗ ಇಲ್ಲವಾ ಅಂತಾ ಸೂಚಿಸಿದಾಗ ಸಾಕ್ಷಿಯು, ಅದು ನನ್ನ ತಂದೆಯವರಿಗೆ ಗೊತ್ತು ಅಂತಾ ನುಡಿಯುತ್ತಾರೆ.

13. ಶರಣಯ್ಯರವರ ಅಣ್ಣ ತಮ್ಮಂದಿರು ಭಾಗ ಆಗುವ ವೇಳೆಯಲ್ಲಿ ಒಟ್ಟು ನಾಲ್ಕು ಸರ್ವೇ ನಂಬರಗಳ ಪೈಕಿ 23 ಎಕರೆ 8 ಗುಂಟೆ ಜಮೀನು ಅವರಿಗೆ ಭಾಗದಲ್ಲಿ ಬಂತು ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಗೆ ಸಂಬಂಧಪಟ್ಟಂತೆ ನನ್ನ ತಂದೆಗೆ ಇದ್ದಷ್ಟು ಮಾಹಿತಿ ನನಗೆ ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಶರಣಯ್ಯ ತನ್ನ ಕೆಟ್ಟ ಹವ್ಯಾಸಗಳಿಗೆ ಬಲಿಯಾಗಿ ಮಾರಾಟ ಮಾಡಿದ್ದರಿಂದ ಸದರಿ ಮಾರಾಟ ವಾದಿಯರ ಭಾಗಕ್ಕೆ ಬಂಧನಕಾರಿ ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 6 ಮತ್ತು 7 ನೇ ವಾದಿಯರ ಮದುವೆಗೆ ಮಾರಾಟ ಮಾಡಿದ್ದಾರೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಶರಣಯ್ಯ ತನ್ನ ಕೆಟ್ಟ ಹವ್ಯಾಸಗಳಿಗೆ ಬಲಿಯಾಗಿದ್ದರಿಂದ ಅದನ್ನು ದುರುಪಯೋಗಪಡಿಸಿಕೊಂಡು ನನ್ನ ತಂದೆಯವರು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

14. ನನ್ನ ಪ್ರಕಾರ ಆ ಸಂದರ್ಭದಲ್ಲಿ ಎಕರೆಗೆ ಸುಮಾರು 6-7 ಲಕ್ಷ ಬೆಲೆ ಬಾಳುತ್ತಿದ್ದವು. ನನ್ನ ತಂದೆಯವರು 1ನೇ ಪ್ರತಿವಾದಿಗೆ ಹಣ ಕೊಡದೇ ಖರೀದಿ ಪತ್ರ ನೊಂದಣಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ದಾವಾ ಜಮೀನುಗಳು ನೀರಾವರಿ ಆಗಿದ್ದರಿಂದ ಎಕರೆಗೆ ಸುಮಾರು 15-20 ಲಕ್ಷ ಬೆಲೆ ಬಾಳುತ್ತಿದ್ದವು ಎಂದರೆ ಸರಿಯಲ್ಲ. ನನ್ನ ತಂದೆಯವರು ಖರೀದಿ ಮಾಡಿದ್ದಾರೆ ಎಂದು ಹೇಳಲಾದ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಮುಖ್ಯ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು